ಇದಕ್ಕಾಗಿ ಹಣ ಇಟ್ಟಿರಲಿಲ್ಲ, ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇಷ್ಟಾದರೂ ಸಹ ನಮ್ಮ ಇಲಾಖೆಯಲ್ಲಿ ಇರತಕ್ಕ ಹಣದಲ್ಲಿ ಯೋಜನೆಗಳನ್ನು ವಿಸ್ತಾರವಾಗಿ ತೆಗೆದುಕೊಂಡಿದ್ದೇವೆ ಮತ್ತು ನಮ್ಮ ಪ್ರವಾಸೋದ್ಯಮ ಇಲಾಖೆಯ ಸಚಿವರ ಸಹಯೋಜನೆ ಮೇರೆಗೆ ಇದನ್ನು ವಿಸ್ತಾರ ಮಾಡಿ ಹೆಚ್ಚಿನ ಗತಿಯಿಂದ ಪರಿಣಾಮಕಾರಿಯಾಗಿ ಮಾಡತಕ್ಕಂಥಾದ್ದಕ್ಕೆ ನನ್ನ ಇಲಾಖೆ ಸಂಪೂರ್ಣ ಸಹಕಾರ ಕೊಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ದೆಹಲಿಯಲೆಲ್ಲಾ ಸಹ ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಉನ್ನತ ಸಮಿತಿಯನ್ನು ಕೇಂದ್ರ ಸರ್ಕಾರ ಈಗಾಗಲೇ ರಚಿಸಿದೆ. ಅದಕ್ಕೆ ಬೇಕಾದಂತಹ ಕೆಲಸಗಳನ್ನು ನಮ್ಮ ಇಲಾಖೆ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು : ಇವತ್ತು ಉಳಿದಿರುವ ಪ್ರಶ್ನೆಗಳನ್ನು ಮುಂದಿನ ದಿವಸಕ್ಕೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ : ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಇದೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಸ್ನೇಹಿತರನ್ನು ಕೇಳಿ.ನಿಮ್ಮ ಸ್ನೇಹಿತರು ಒಂದೊಂದು ಪ್ರಶ್ನೆ ಮೇಲೆ 25 ಸಪ್ಲಿಮೆಂಟರೀಸ್ ಕೇಳುತ್ತಾರೆ. ಇವತ್ತು ಉಳಿದಿರುವ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ. ಅದನ್ನು ಮುಂದಿನ ಒಂದೆರಡು ದಿನಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. ಕ್ಷಮಿಸಿ, ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಇಪ್ಪತ್ತು ನಿಮಿಷಗಳು ಜಾಸ್ತಿ ಆಗಿದೆ.

(ಗೊಂದಲ)

ಅಧ್ಯಕ್ಷರು : ಒಂದು ಕೆಲಸ ಮಾಡೋಣ. ಬಿ.ಎ.ಸಿ.ಮೀಟಿಂಗ್ ನಲ್ಲಿ ಈ ಸಬ್ಜಕ್ಟ್ ಇಡೋಣ. ಪ್ರಶ್ನೋತ್ತರ ಕಾಲವನ್ನು ಎರಡು ಗಂಟೆ ಕಾಲ ಮಾಡೋಣವೆಂದರೆ ಪ್ರಶ್ನೋತ್ತರವನ್ನು ಎರಡು ಗಂಟೆ ಮಾಡಲು ಒಪ್ಪಿದರೆ I have no objections. If the question have is extend for two hours, I have no objection. ಈಗಾಗಲೇ ಇವತ್ತು ಪ್ರಶ್ನೋತ್ತರಕ್ಕೆ 20 ನಿಮಿಷ ಹೆಚ್ಚಿಸಲಾಗಿದೆ. ನ್ಯಾಯವಾಗಿ ಪ್ರಶ್ನೆ ಲ್ಯಾಪ್ಸ್ ಆಗಬೇಕು. ಲ್ಯಾಪ್ಸ್ ಆಗುವುದಿಲ್ಲ ಮುಂದೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನೆ. ಸಿಗಟಿ ಬಗ್ಗೆ ನಿಯಮ 69ರ ಅಡಿಯಲ್ಲಿ ಅಲೋ ಮಾಡುತ್ತೇನೆ. ಮಾತನಾಡಿ, I have already allowed.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 5-3-2003ರ ಲಿಖಿತ ಮೂಲಕ ಉತ್ತರಿಸುವ 153 ಪ್ರಶ್ನೆಗಳ ಪೈಕಿ 136 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ - 1)

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು), ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ ಅವರ ಪರವಾಗಿ)

ಮಾನ್ಯ ಅಧ್ಯಕ್ಷರೆ, 1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ 39(1) ಮೇರೆಗೆ:

1. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2001-02ನೇ ಸಾಲಿನ ಸಾಧನಾ ವರದಿ.
2. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2001-02ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕ ಪರಿಶೋಧನಾ ವರದಿ.
3. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2000-01ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

1956ರ ಕಂಪನಿ ಕಾಯ್ದೆಯ ಅದಿನಿಯಮ 619(ಎ) ಪ್ರಕರಣದ ಮೇರೆಗೆ:

4. ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತದ 2001-02ನೇ ಸಾಲಿನ ಎಂಟನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯ 4:85ರ ಕಂಡಿಕೆ 12(7) ಪ್ರಕರಣದ ಮೇರೆಗೆ:

5. ಕರ್ನಾಟಕ ಲೋಕಾಯುಕ್ತದ 2001-02ನೇ ಸಾಲಿನ ಹದಿನಾರನೇ ವಾರ್ಷಿಕ ಸಂಚಿತ ವರದಿಯನ್ನು ಮಂಡಿಸುತ್ತಿದ್ದೇನೆ.

1951ರ ರಾಜ್ಯ ಹಣಕಾಸು ಸಂಸ್ಥೆ ಅಧಿನಿಯಮ 38(3)ನೇ ಪ್ರಕರಣದ ಮೇರೆಗೆ:

6. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2000-01ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 1955ನೇ ಸಾಲಿನ ಕಾಯ್ದೆಯ ಅಧಿನಿಯಮ 13ರನ್ವಯ:

7. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ, (ಮಾನ್ಯ ಗೃಹ ಸಚಿವರು) ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) ಅವರ ಪರವಾಗಿ

ಮಾನ್ಯ ಅಧ್ಯಕ್ಷರೆ, 1980ರ ಕಾಡಾ ಅಧಿನಿಯಮ 25ನೇ ಕಾಲಂ ಮೇರೆಗೆ:

8. ಕಾವೇರಿ ಜಲಾನಯನ ಯೋಜನೆ ಮೈಸೂರು ಕಾಡಾ ಪ್ರಾಧಿಕಾರದ 2001-02ನೇ ಸಾಲಿನ ವಾರ್ಷಿಕ ವರದಿ.
9. ಮಲಪ್ರಭಾ ಮತ್ತು ಘಟಪ್ರಭಾ ಕಾಡಾ ಪ್ರಾಧಿಕಾರದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

10. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ 2001-02ನೇ ಸಾಲಿನ 8ನೇ ವಾರ್ಷಿಕ ವರದಿ.
11. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2001-02ನೇ ಸಾಲಿನ 4ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರ ಪರವಾಗಿ ಮಾನ್ಯ

ಅಧ್ಯಕ್ಷರ 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ:

12. ಕೋಲಾರ ಜಿಲ್ಲಾ ಪಂಚಾಯತ್‌ನ 2001-02ನೇ ಸಾಲಿನ ವಾರ್ಷಿಕ ವರದಿ.
13. ತುಮಕೂರು ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
14. ಮಂಡ್ಯ ಜಿಲ್ಲಾ ಪಂಚಾಯತ್‌ನ 2001-02ನೇ ವಾರ್ಷಿಕ ಆಡಳಿತ ವರದಿ.
15. ಹಾವೇರಿ ಜಿಲ್ಲಾ ಪಂಚಾಯತ್‌ನ 2001-02ನೇ ಸಾಲಿನ ವಾರ್ಷಿಕ ಆಡಳಿತ ವರದಿ.
16. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2001-02ನೇ ಸಾಲಿನ ವಾರ್ಷಿಕ ಆಡಳಿತ ವರದಿ.
17. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ.
18. ಮೈಸೂರು ಜಿಲ್ಲಾ ಪಂಚಾಯತ್‌ನ 2001-02ನೇ ಸಾಲಿನ ವಾರ್ಷಿಕ ಆಡಳಿತ ವರದಿ.
19. ವಿಜಾಪುರ ಜಿಲ್ಲಾ ಪಂಚಾಯತ್‌ನ 2001-02ನೇ ಸಾಲಿನ ವಾರ್ಷಿಕ ಆಡಳಿತ ವರದಿ.
20. ಚಾಮರಾಜನಗರ ಜಿಲ್ಲಾ ಪಂಚಾಯತ್‌ನ 2001-02ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) ಮಾನ್ಯ ಅಧ್ಯಕ್ಷ

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

21. ಕರ್ನಾಟಕ ರಾಜ್ಯ ವೀನಿಯರ್ಸ್ ಲಿಮಿಟೆಡ್‌ನ 2001-02ನೇ ಸಾಲಿನ ವಾರ್ಷಿಕ ವರದಿ.
22. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

23. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮತ್ತು ಲೆಕ್ಕ ಪತ್ರಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

24. ಕೊಂಕಣ ರೈಲ್ವೆ ನಿಗಮ ನಿಯಮಿತದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರ ಪರವಾಗಿ)

ಮಾನ್ಯ ಅಧ್ಯಕ್ಷರೆ 1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

25. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ 2001-02ನೇ ಸಾಲಿನ ವಾರ್ಷಿಕ ವರದಿ.

26. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2001-02ನೇ ಸಾಲಿನ 25ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.
ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕಾ ಮತ್ತು ಹಜ್ ಸಚಿವರು) ಅವರ ಪರವಾಗಿ
ಮಾನ್ಯ ಅಧ್ಯಕ್ಷರೆ, 1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

27. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 2001-02ನೇ ಸಾಲಿನ 38ನೇ ವಾರ್ಷಿಕ ವರದಿ.

28. ವಾರ್ಷಿಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2001-02ನೇ ಸಾಲಿನ ವಾರ್ಷಿಕ ವರದಿ ಹಾಗೂ 2000-01ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

29. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.
ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಾಧ್ಯಮ ಕೈಗಾರಿಕಾ ಸಚಿವರು)
ಮಾನ್ಯ ಅಧ್ಯಕ್ಷರೆ
1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

30. ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ 2001-02ನೇ ಸಾಲಿನ 56ನೇ ವಾರ್ಷಿಕ ವರದಿ.

31. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ 2001-02ನೇ ಸಾಲಿನ 36ನೇ ವಾರ್ಷಿಕ ವರದಿ.

32. ಎನ್.ಜಿ.ಇ.ಎಫ್ ಲಿಮಿಟೆಡ್‌ನ 2001-02ನೇ ಸಾಲಿನ 37ನೇ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.

33. ದಿ ಮೈಸೂರು ಕ್ರೋಮಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ 2001-02ನೇ ಸಾಲಿನ 62ನೇ ವಾರ್ಷಿಕ ವರದಿ.

34. ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತದ 2001-02ನೇ ಸಾಲಿನ 57ನೇ ವಾರ್ಷಿಕ ವರದಿ.

35. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2001-02ನೇ ಸಾಲಿನ 20ನೇ ವಾರ್ಷಿಕ ವರದಿ ಲೆಕ್ಕಪತ್ರಗಳು.

36. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ 2001-02ನೇ ಸಾಲಿನ 22ನೇ ವಾರ್ಷಿಕ ವರದಿ.

37. ಮೈಸೂರು ಕಾಗದ ಕಾರ್ಖಾನೆ ಲಿಮಿಟೆಡ್‌ನ 2001-02ನೇ ಸಾಲಿನ್ ವಾರ್ಷಿಕ ವರದಿ.

38. ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ವಿಜನ್ಸೀಸ್ ಲಿಮಿಟೆಡ್‌ನ 2001-02ನೇ ಸಾಲಿನ ವಾರ್ಷಿಕ ವರದಿ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಶ್ರೀ ಮಾನ್ಯ ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

39. ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ನಿಗಮ ನಿಯಮಿತದ 2001-02ನೇ ಸಾಲಿನ ಎಂಟನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಅಧಿನಿಯಮ 1987ರ ಪರಿಚ್ಛೇದ 18(4) ಮೇರೆಗೆ:

40. ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ 2000-01ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯ ಕರ್ನಾಟಕ ಕಾಯ್ದೆ 22ರ 1980 ಸಂಖ್ಯೆ:24(3)ರ ಪ್ರಕರಣದ ಅಧಿನಿಯಮ ಪರಿಚ್ಛೇದ 26(2)ರಂತೆ:

41. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ

1963ರ ಕೃಷಿ ವಿಶ್ವವಿದ್ಯಾಲಯಗಳು ಅಧಿನಿಯಮ 08(9)ನೇ ಪ್ರಕರಣದ ಮೇರೆಗೆ:

42. ಧಾರವಾಡ ಕೃಷಿ ವಿಶ್ವವಿದ್ಯಾಲಯದ 2001-02ನೇ ಸಾಲಿನ ವಾರ್ಷಿಕ ವರದಿ.

43. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 2001-02ನೇ ಸಾಲಿನ ವಾರ್ಷಿಕವರದಿ.

44. ಧಾರವಾಡ ಕೃಷಿ ವಿಶ್ವವಿದ್ಯಾಲಯದ 2000-01ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಮಂಡಿಸುತ್ತಿದ್ದೇನೆ.

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

45. ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ 2001-02ನೇ ಸಾಲಿನ 29ನೇ ವಾರ್ಷಿಕ ವರದಿ.

46. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್ 2001-02ನೇ ಸಾಲಿನ 35ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

47. ಕರ್ನಾಟಕ ಆಗ್ರೋ ಪೋಟೀನ್ಸ್ ಲಿಮಿಟೆಡ್‌ನ 2001-02ನೇ ಸಾಲಿನ 27ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ:

48. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ 2001-02ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.
ಕರ್ನಾಟಕ ಕೊಳಚೆ ಪ್ರದೇಶಗಳು (ಅಭಿವೃದ್ಧಿ ಮತ್ತು ನಿರ್ಮೂಲನಾ ಕಾಯ್ದೆ) 1973ರ ಕಲಂ 37ರನ್ವಯ:

49. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.
ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)
ಶ್ರೀ ಎಂ. ಮಹದೇವ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರ ಪರವಾಗಿ ಮಾನ್ಯ ಅಧ್ಯಕ್ಷರೆ,
1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

50. ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತ 2001-02ನೇ ಸಾಲಿನ ಇಪ್ಪತ್ತೆಂಟನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.
ಡಾ: ಬಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ,
1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 45(2), 47(4)ನೇ ಪ್ರಕರಣದ ಮೇರೆಗೆ:

51. ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.
ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) ಮಾನ್ಯ ಅಧ್ಯಕ್ಷರೆ,
1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

52. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2001-02ನೇ ಸಾಲಿನ ವಾರ್ಷಿಕ ವರದಿ.

53. ದಿ ಕರ್ನಾಟಕ ಹ್ಯಾಂಡ್ ಲೂಮ್ ಡೆವಲಪ್ ಮೆಂಟ್ ಕಾರ್ಪೋರೇಷನ್ ಲಿಮಿಟೆಡ್‌ನ 2001-02ನೇ ಸಾಲಿನ 27ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.
ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)
ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರ ಪರವಾಗಿ ಮಾನ್ಯ ಅಧ್ಯಕ್ಷರೆ,
1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

54. ಕಿಯೋನಿಕ್ಸ್ ಸಂಸ್ಥೆಯ 2001-02ನೇ ಸಾಲಿನ 24ನೇ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.
ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)
ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,
1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

55. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2001-02ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.

ಕರ್ನಾಟಕ ವಿದ್ಯುಚ್ಛಕ್ತಿ, ಸುಧಾರಣಾ ಅಧಿನಿಯಮ 1999ರ ಭಾಗ-1, 4ನೇ ಉಪ ಕಂಡಿಕೆಯ ಮೇರೆಗೆ:

56. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 2001-02ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:

57. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2001-02ನೇ ಸಾಲಿನ 32ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ವಿಧಾನ ಸಭಾ ಕ್ಷೇತ್ರಗಳ ಮರು ವಿಂಗಡನೆ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ (ಕನಕಪುರ), ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ತಮಗೆ ಒಂದು ಪತ್ರ ಬರೆದು ತಮ್ಮ ಅಪ್ಪಣೆ ಪಡೆದಿದ್ದೇನೆ. ಇವೊತ್ತು ಇಡೀ ಸದನಕ್ಕೆ ಸಂಬಂಧಪಟ್ಟಿರತಕ್ಕ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಕಳೆದ ಎರಡು ತಿಂಗಳುಗಳಿಂದ ನಮ್ಮ ಬಹುತೇಕ ಶಾಸಕರು ಒಂದು ರೀತಿಯ ಆತಂಕಕ್ಕೆ ಒಳಗಾಗಿರತಕ್ಕ ವಿಚಾರ ತಮ್ಮ ಗಮನಕ್ಕೆ ಈಗಾಗಲೇ ಬಂದಿದೆ. ಈ ಕ್ಷೇತ್ರಗಳ ಮರುವಿಂಗಡಣೆ ವಿಚಾರದಲ್ಲಿ ಚರ್ಚೆ, ವಿಮರ್ಶೆ, ವಿಶ್ಲೇಷಣೆ ಇವೆಲ್ಲವೂ ನಡೆಯುತ್ತಿದೆ. ಜೊತೆಗೆ ಬಹಳ ಊಹಾಪೋಹಗಳಾಗಿವೆ. ನನಗೆ ಗೊತ್ತಿರುವಂತೆ ಎಲ್ಲವೂ ಊಹಾಪೋಹಗಳೇ, ಇದರಿಂದ ಸಾರ್ವಜನಿಕರಲ್ಲಿ ಒಂದು ರೀತಿಯ ಗೊಂದಲವೇರ್ಪಟ್ಟಿದೆ. ಏನಾಗಿದೆಯೆಂದರೆ, 'ನನ್ನ ಕ್ಷೇತ್ರ ಇನ್ನು ಮುಂದೆ ಮೀಸಲಾತಿಗೆ ಹೋಗಬಹುದು' ಅಥವಾ 'ನನ್ನ ಕ್ಷೇತ್ರ ಒಡೆದುಹೋಗಬಹುದು, ಮೀಸಲಾತಿ ಇಲ್ಲದೆ ಆಗಬಹುದು, ನಮ್ಮ ಕ್ಷೇತ್ರ ಸಂಪೂರ್ಣವಾಗಿ ವಿಸರ್ಜನೆಯಾಗಬಹುದು' ಎನ್ನುವ ಆತಂಕ ವಿಧಾನಸಭಾ ಚುನಾವಣೆ ಇನ್ನು ಎರಡು ವರ್ಷ ಇರುವಂಥ ಸಂದರ್ಭದಲ್ಲಿ ಇದು ಆಗಿದೆ. ಮತ್ತೆ ಕೆಲವರಿಗೆ ಏನಾಗಿದೆಯೆಂದರೆ, ಆ ಜಾಗ ನಮಗೆ ಮತ್ತೆ ಬರುವುದಿಲ್ಲವೆಂದು ಕೆಲವು ಶಾಸಕರುಗಳು ಆ ಕ್ಷೇತ್ರದ ಬೆಳವಣಿಗೆಗಳ ಬಗ್ಗೆ, ಅಭಿವೃದ್ಧಿ ಕೆಲಸ-ಕಾರ್ಯಗಳ ಬಗ್ಗೆ ಸ್ವಲ್ಪ ನಿರಾಸಕ್ತಿ ತೋರಿಸುತ್ತಿರುವುದನ್ನೂ ಸಹ ನಾನು ಗಮನಿಸಿದ್ದೇನೆ. ಆದರೆ, ಕೆಲವು ಕಡೆಗಳಲ್ಲಿ ಆಸಕ್ತಿ ಹೆಚ್ಚಾಗಿದೆ. ಅಂದರೆ ಅದು ಸೇರಬಹುದೆಂದು, ಇದನ್ನೂ ಸೇರಿಸಿಕೊಳ್ಳಬೇಕೆಂಬ ಪ್ರಯತ್ನವೂ ಸಹ ನಡೆಯುತ್ತಿದೆ. ಇದು ಜಾತಿ ಆಧಾರದ ಮೇಲೆ ಅಥವಾ ಗುಂಪಿನ ಆಧಾರದ ಮೇಲೆ ಮತ್ತು ರಾಜಕೀಯ ದ್ವೇಷ, ಅಸೂಯೆ, ಸೇಡನ್ನು ತೀರಿಸಿಕೊಳ್ಳುವುದಕ್ಕೆ ಇದೊಂದು ಅವಕಾಶವಾಗಬಹುದೇನೋ ಎನ್ನುವ ಅನುಮಾನ ಅನೇಕರಲ್ಲಿದೆ. ಒಟ್ಟಾರೆ ಬಹುತೇಕ ಸದಸ್ಯರು ಇದೊಂದು ವಿಚಾರದಲ್ಲಿ ಆತಂಕ ಮತ್ತು ಗೊಂದಲದಲ್ಲಿದ್ದಾರೆ. ಅವರ ಮನಸ್ಸಿನೊಳಗೆ ಗೊಂದಲವಿದೆ. ಇದರ ಜೊತೆಗೆ ಪತ್ರಿಕೆಗಳಲ್ಲಾ ಬರುತ್ತಿದೆ. ಪತ್ರಿಕೆಯವರು